Jubilee of the Basel
Evangelical Mission in India
1884.

JUBILEE

OF THE

BASEL EVANGELICAL MISSION

IN INDIA

30th October 1884.

ಈ ದಕ್ಷಿಣ ಹಿಂದುಸ್ಥಾನದ ಪಶ್ಚಿಮ ತೀರದಲ್ಲಿ ಬಾಸೆಲ್ ಮಿಶ್ಯನ್ ಸುವಾರ್ತಾಕಾರ್ಯ ಪ್ರಾರಂಭವಾಗಿ ನಡಿಯುತ್ತಾ ಬಂದು ಈಗ ಐವತ್ತು ವರ್ಷವಾಯಿತೆಂಬದರ ಜ್ಞಾಪಕಾರ್ಥ ಯೋಬೇಲೆಂಬ ಮಹೋತ್ಸಹವು.

೧೮೧೫ನೇ ಇಸವಿಯಲ್ಲಿ ಬಾಸೆಲ್ ಪಟ್ಟಣದಲ್ಲಿ ನಮ್ಮ ಮಿಶ್ಯನ್ ಹುಟ್ಟಿತು. ಫೊನ್‌ಬ್ರೊನ್ ಬ್ಲೂಮ್‌ಹಾರ್ಡ್ ಮೊದಲಾದ ಧೊರೆಗಳು ಕಮ್ಮಿಟಿಯಾಗಿ ಈ ಕಾರ್ಯವನ್ನು ಮುಂದರಿಸಿ, ೧೮೨೧ನೇ ಇಸವಿಯಲ್ಲಿ ಮೊದಲು ಕೌಕಾಸಿಯ, ಪಾರ್ಶಿಸ್ಥಾನ ಎಂಬ ಶೀಮೆಗಳಿಗೆ ಮಿಶ್ಯನೆರಿಗಳನ್ನು ಕಳುಹಿಸಿದರು. ಅದೇ ೧೮೨೧ನೇ ಇಸವಿಯಲ್ಲಿ ಬಾಸೆಲ್ ಪಟ್ಟಣದಲ್ಲಿ ಮೊದಲನೇ ಸರ್ತಿ ಮಿಶ್ಯನ್ ಹಬ್ಬ ಆಚರಿಸೋಣಾಯಿತು. ಈ ಕೌಕಾಸಿಯ ಪ್ರಾಂತ್ಯದಲ್ಲಿ ೧೮೩೫ನೇ ಇಸವಿ ವರೆಗೆ ಮಿಶ್ಯನ್ ಕಾರ್ಯವು ಚನ್ನಾಗಿ ನಡೆದು ಬಂದಾಗ್ಯೂ, ವಿರೋಧಿಗಳ ಪ್ರೇರಣೆಯಿಂದ ರುಸ್ಯ ಸರಕಾರದವರು, ಆ ಕಾರ್ಯ ಅಲ್ಲಿ ಇನ್ನು ಮುಂದೆ ನಡಿಸ ಬಾರದೆಂದು ಕಠಿಣ ಅಪ್ಪಣೆ ಕೊಟ್ಟದ್ದರಿಂದ, ೧೮೩೮ನೇ ಇಸವಿಯಲ್ಲಿ ಆ ದಿಕ್ಕಿನಲ್ಲಿ ಮಿಶ್ಯನ್ ಕಾರ್ಯವೆಲ್ಲ ಬಿಡ ಬೇಕಾಯಿತು.

೧೮೨೭ನೇ ಇಸವಿಯಲ್ಲಿ ನಮ್ಮ ಕಮ್ಮಿಟಿಯವರು ಅಫ್ರಿಕದ ಪಶ್ಚಿಮ ದಿಕ್ಕಿನಲ್ಲಿರುವ ಗೋಲ್ಡಕೋಸ್ತ ಎಂಬ ಶೀಮೆಗೆ ಮಿಶ್ಯನೆರಿಗಳನ್ನು ಕಳುಹಿಸ ಪ್ರಾರಂಭಿಸಿದರು. ಅಲ್ಲಿ ಈ ಕೆಲಸವು ಇಷ್ಟು ವರೆಗೆ ನಡಿಯುತ್ತಾ ಬರುತ್ತದೆ. ಈಗ ಅಲ್ಲಿ ಹತ್ತು ಠಾಣ್ಯಗಳು, ೩೮ ಉಪ ಠಾಣ್ಯಗಳು ಅವೆ; ಅವುಗಳಲ್ಲಿ ೨೨ ವಿಲಾಯತೀ ಮಿಶ್ಯನೆರಿಗಳೂ ೧೫ ಧೊರೆಸಾನಿಗಳೂ ೧೬ ಉಪಪ್ರಸಂಗಿಗಳೂ ೪೯ ಉಪದೇಶಕರೂ ೩೯ ಶಾಲಾ ಉಪಾಧ್ಯಾಯರೂ ಕೆಲಸ ನಡಿಸುತ್ತಾರೆ. ಅಲ್ಲಿ ಸಭೆಯವರ ಲೆಖ್ಖ ೫೫೬೭; ಸ್ನಾನ ಬೋಧನೆ ಹೊಂದುವವರು ೨೦೨ ಜನರು.

ಹಿಂದುಸ್ಥಾನದಲ್ಲಿ ಸಹ ಮಿಶ್ಯನ್ ಕಾರ್ಯ ನಡಿಸ ಬೇಕೆಂದು ನಮ್ಮ ಕಮ್ಮಿಟಿಯವರಿಗೆ ಹಲವು ವರ್ಷಗಳಿಂದ ಆಲೋಚನೆ ಇತ್ತು. ಆದದರಿಂದ ಮೂವತ್ತಮೂರನೇ ಇಸವಿಯಲ್ಲಿ

ಅದಕ್ಕೆ ಇದ್ದ ಅಭ್ಯಂತರಗಳು ತೊಲಗಿದ ಕೂಡಲೆ ಈ ಕೆಲಸಕ್ಕೆ ಕೈ ಹಾಕಿ, ಮೂವರನ್ನು ನೇಮಿಸಿ ಕಳುಹಿಸಿದರು. ಅವರು ಯಾರಂದರೆ—ಹೇಬಿಕ್, ಲೇನರ್, ಗ್ರೈನರ್ ಧೊರೆಗಳು. ಇವರು ಎಲ್ಲಾ ಸಾಹಿತ್ಯಗಳನ್ನು ಒದಗಿಸಿಕೊಂಡು, ೧೮೩೪ನೇ ಇಸವಿ ಮಾರ್ಚಿ ೨೩ನೆಯಲ್ಲಿ ಬಾಸೆಲ್ ಪಟ್ಟಣವನ್ನು ಬಿಟ್ಟು ಇಂಗ್ಲಾಂಡಿಗೆ ಹೋಗಿ, ಅಲ್ಲಿಂದ ಜೂಲಾಯಿ ೧೫ನೇ ತಾರೀಕಿನಲ್ಲಿ ಹಿಂದುಸ್ಥಾನಕ್ಕೆ ಹೊರಟು, ಆ ವರ್ಷದ ಅಕ್ಟೋಬರ ೩೦ನೆಯಲ್ಲಿ ಮಂಗಳೂರಿಗೆ ಮುಟ್ಟಿದರು; ಮತ್ತು ಇಲ್ಲಿ ನೆಲಸಿಕೊಂಡು, ಊರಿನ ಭಾಷೆಯನ್ನು ಕಲಿತು, ಕ್ರಮೇಣ ಸುವಾರ್ತೆಯನ್ನು ಜನರಲ್ಲಿ ಹಬ್ಬಿಸಲಿಕ್ಕೆ ಪ್ರಾರಂಭಿಸಿದರು. ಎರಡು ವರ್ಷಗಳನಂತರ, ಮೇಗ್ಲಿಂಗ್, ಲಾಯರ್, ಲೇಷ್, ಫ್ರೈ ಧೊರೆಗಳು ಮಂಗಳೂರಿಗೆ ಮುಟ್ಟಿದರು. ಬಳಿಕ ಗುಂಡರ್ಟ್ ಮೊದಲಾದ ಬೇರೆ ಬೇರೆ ಧೊರೆಗಳು ಬಂದರು. ಹೀಗೆ ನಮ್ಮ ಮಿಶ್ಯನ್ ಕೆಲಸವು ಕನ್ನಡ, ಮಹಾರಾಷ್ಟ್ರ, ಮಲಬಾರ, ಕೊಡಗು, ನೀಲಗಿರಿ ಎಂಬ ಶೀಮೆಗಳಲ್ಲಿ ಹಬ್ಬಿ ಪ್ರಬಲವಾಗುವದಾಯಿತು. ಈಗ

ಕನ್ನಡ ಜಿಲ್ಲೆಯಲ್ಲಿ	೭	ಠಾಣ್ಯಗಳು,	೨೦	ಉಪಠಾಣ್ಯಗಳು.
ದಕ್ಷಿಣ ಮಹಾರಾಷ್ಟ್ರ ಶೀಮೆಯಲ್ಲಿ	೪	„	೪	„
ಮಲಬಾರಿನಲ್ಲಿ	೬	„	೧೦	„
ನೀಲಗಿರಿಯಲ್ಲಿ	೨	„	೧	„

ಈ ೧೯ ಠಾಣ್ಯಗಳಲ್ಲಿ ವಿಲಾಯತೀ ಮಿಶ್ಯನೆರಿಗಳು ೬೩, ಧೊರೆಸಾನಿಗಳು ೫೦, ಉಪಪ್ರಸಂಗಿಗಳು ೭, ಉಪದೇಶಕರು ೮೫, ಉಪಾಧ್ಯಾಯರು ೮೯ ಮಂದಿ ಮಿಶ್ಯನ್ ಕಾರ್ಯವನ್ನು ನಡಿಸುತ್ತಾರೆ. ಈ ನಮ್ಮ ಹಿಂದುಸ್ಥಾನದ ಮಿಶ್ಯನಿಗೆ ಶೇರಿದ ಎಲ್ಲಾ ಸಭೆಯವರ ಸಂಖ್ಯೆ ೭೯೮೦.

೧೮೫೧ನೇ ಇಸವಿಯಲ್ಲಿ ಮಿಶ್ಯನ್ ಇನ್‌ಸ್ಪೆಕ್ಟರ್ ಯೋಸೆನ್‌ಹನ್ಸ್ ಧೊರೆಗಳು, ಮತ್ತು ೧೮೮೦ನೇ ಇಸವಿಯಲ್ಲಿ ಅವರ ಉತ್ತರಾಧಿಕಾರಿಗಳಾಗಿದ್ದ ಶೊತ್ತ್ ಧೊರೆಗಳು ಹಿಂದುಸ್ಥಾನದ ನಮ್ಮ ಮಿಶ್ಯನ್ ಕಾರ್ಯ ನೋಡುವದಕ್ಕೆ ಬಂದರು.

ಚೀನ ದೇಶದಲ್ಲಿ ಸಹ ೧೮೪೬ನೇ ಇಸವಿಯಲ್ಲಿ ನಮ್ಮ ಮಿಶ್ಯನಿನ ಕೆಲಸವು ಪ್ರಾರಂಭವಾಗಿ, ಇಷ್ಟು ವರೆಗೆ ನಡಿಯುತ್ತಾ ಬರುತ್ತದೆ. ಅಲ್ಲಿ ೯ ಠಾಣ್ಯಗಳೂ ೨೦ ಉಪಠಾಣ್ಯಗಳೂ ಸ್ಥಾಪಿತವಾಗಿ, ೧೪ ವಿಲಾಯತೀ ಮಿಶ್ಯನೆರಿಗಳು, ೧೧ ಧೊರೆಸಾನಿಗಳು, ೭ ಉಪಪ್ರಸಂಗಿಗಳು, ೨೯ ಉಪದೇಶಕರು, ೧೩ ಉಪಾಧ್ಯಾಯರು ಸಹ ಇರುತ್ತಾರೆ. ಅಲ್ಲಿಯ ಸಭೆಯವರ ಸಂಖ್ಯೆ ೨೬೦೭.

ನಮ್ಮ ಮಂಗಳೂರ ಸಭೆಯಲ್ಲಿ ವಿಶೇಷವಾಗಿ ಕಂಡು ಬರುವದೇನಂದರೆ—೧೮೪೦ನೇ ಇಸವಿಯ ಅಂತ್ಯದಲ್ಲಿ ಸಭೆಯವರ ಸಂಖ್ಯೆ ೨೯ ಮಂದಿಯಾಗಿತ್ತು; ಈ ಮಿಶ್ಯನ್ ಕಾರ್ಯ ಪ್ರಾರಂಭವಾಗಿ ೨೫ ವರ್ಷಗಳ ವರೆಗೆ ನಡದನಂತರ, ಅಂದರೆ ೧೮೫೯ನೇ ಇಸವಿಯಲ್ಲಿ ಸಭೆಯವರ ಸಂಖ್ಯೆ ೫೮೮ ಆಗಿತ್ತು. ಅಂದಿನಿಂದ ತಿರಿಗಿ ೨೫ ವರ್ಷಗಳನಂತರ ಈಗ ಸುಮಾರು ೧೫೫೦ ಆಗುತ್ತದೆ. ಆರಂಭದಿಂದ ಈ ವರೆಗೆ ಮಂಗಳೂರಿನಲ್ಲಿ ಸ್ನಾನ ಹೊಂದಿದವರ ಸಂಖ್ಯೆಯು ೨೫೮೨. ಇದರಲ್ಲಿ ನಮ್ಮ ಹೆಸರುಗಳು ಸಹ ಶೇರಿರುತ್ತವೆ. ಆದರೆ ಜೀವದ ಪುಸ್ತಕದಲ್ಲಿ ಸಹ ಶೇರಿರುತ್ತವೋ ಏನೋ ಎಂಬದನ್ನು ಮನಸ್ಸಿಗೆ ತರೋಣ. ಮೃತವಾದವರ ಸಂಖ್ಯೆಯು ೯೨೫.

ಇಬ್ರೀಯರ ೧೩, ೭ನೆಯಲ್ಲಿ,—"ನಿಮಗೆ ದೇವರ ವಾಕ್ಯವನ್ನು ಹೇಳಿದವರನ್ನು ಜ್ಞಾಪಕ ಮಾಡಿಕೊಳ್ಳಿರಿ, ಅವರ ಅಂತ್ಯವನ್ನು ನೋಡಿ, ಅವರ ವಿಶ್ವಾಸವನ್ನು ಹಿಂದಟ್ಟಿರಿ!" ಎಂಬ ವಾಕ್ಯದ ಪ್ರಕಾರ, ವಿಶೇಷವಾಗಿ ನಮ್ಮ ಜಿಲ್ಲೆಗೆ ಬಂದು ಮಿಶ್ಯನ್ ಕಾರ್ಯವನ್ನು ನಡಿಸಿ ಇಹವನ್ನು ಬಿಟ್ಟು ಪರವನ್ನೈದಿದವರನ್ನು ಸಹ ನೆನಪಿಗೆ ತರೋಣ. ಇವರು ಯಾರಂದರೆ:—

				ಬಂದದ್ದು.	ಹೋದ್ದು.	ಸತ್ತದ್ದು.
1.	ಹೇಬಿಖ್	ಧೊರೆ	(Hebich)	1834	1859	1868
2.	ಲೇನರ್	"	(Lehner)	1834	1848	?
3.	ಗ್ರೈನರ್	"	(Greiner)	1834	1855	1878 ?
4.	ಮೇಗ್ಲಿಂಗ್	"	(Mœgling)	1836	1860	1881
5.	ಲೇಷ್	"	(Lœsh)	1838	1840	1842
6.	ಫ್ರೈ	"	(Frey)	1838	1843	1871
7.	ಸುತ್ತೆರ್	"	(Sutter)	1838	1846	?
8.	ಸುಪ್ಪೆರ್	"	(Supper)	1839	1843	?
9.	ಫ್ರಿಟ್ಸ್	"	(Fritz)	1839	1880	1883
10.	ಎಸ್ಸಿಗ್	"	(Essig)	1839	—	1845
11.	ವೈಗ್ಲೆ	"	(Weigle)	1839	—	1855
12.	ಅಮ್ಮನ್	"	(Ammann)	1839	—	1865
13.	ಹೂಬೆರ್	"	(Huber)	1841	1855	1881
14.	ಅಲ್ಬ್ರೆಖ್ತ್	"	(Albrecht)	1842	1865	1866
15.	ಮೇರಿಕೆ	"	(Mœrike)	1845	1865	1867
16.	ವಿರ್ಥ್	"	(Würth)	1845	—	1869
17.	ಬೀಲೆರ್	"	(Bühler)	1846	—	1854
18.	ಹೋಖ್	"	(Hoch)	1846	1860	1865
19.	ಲೇಮನ್	"	(Lehmann)	1848	1859	1875
20.	ಹಲ್ಲೆರ್	"	(Haller)	1851	1865	1878
21.	ಕುಲ್ಲೆನ್	"	(Kullen)	1851	1855	1865 ?
22.	ಕೌಫ್ಮನ್	"	(Kauffmann)	1853	1869	1869
23.	ಕಮ್ಮೆರೆರ್	"	(Cammerer)	1854	—	1858
24.	ಹೌಸೆರ್	"	(Hausser)	1856	—	1858
25.	ಕ್ಯೈಲೆರ್	"	(Keuler)	1856	—	1858
26.	ಹಾನ್	"	(Hahn)	1857	1871	1875
27.	ಶೊಖ್	"	(Schoch)	1857	—	1876
28.	ವಿರ್ತೆಲೆ	"	(Würtele)	1858	—	1863
29.	ಫಿಂಕ್	"	(Finkh)	1758	1865	1865
30.	ತ್ರೌಬ್	"	(Traub)	1859	1868	1868
31.	ರೀಮ್	"	(Riehm)	1860	1872	1872
32.	ಗುಂಡೆರ್ಟ್	"	(Gundert)	1863	—	1879
33.	ರ್ಯೈಥೆರ್	"	(Reuther)	1867	—	1871
34.	ಶ್ಮೀದ್	"	(Schmid)	1870	—	1870
35.	ಬುರ್ಖರ್ಡ್	"	(Burkhardt)	1872	—	1881
36.	ಜಿಗ್ಲೆರ್	"	(Ziegler)	1872	—	1881

ಈ ಹೆಸರುಗಳನ್ನು ಓದಿ ಕೇಳಿದವರಿಗೆ ಕೆಲವು ಧೊರೆಸಾನಿಯುವರ ನೆನಪು ಸಹ ಬರಬಹುದು. ಆದರೆ ಅವರ ಹೆಸರುಗಳನ್ನು ವಿವರವಾಗಿ ಬರಿಯುವರೆ ಸಂದರ್ಭವಿಲ್ಲ. ಅವರವರ ಪರಿಚಿತಿ ಇದ್ದವರು ಅವರನ್ನು ಜ್ಞಾಪಕ ಮಾಡಿಕೊಳ್ಳಲಿ.

ಇವರಲ್ಲದೆ ಈ ಜಿಲ್ಲೆಯಲ್ಲಿ ಇದ್ದು, ವಿಲಾಯತಿಗೂ ಬೇರೆ ಸ್ಥಳಗಳಿಗೂ ಹೋಗಿ ಇನ್ನು ಬದುಕುವವರು ಯಾರಂದರೆ:—

ಧೊರೆಗಳು.	ಬಂದದ್ದು.	ಹೋದ್ದು.	ಧೊರೆಗಳು.	ಬಂದದ್ದು.	ಹೋದ್ದು.
H. Gundert	1836	1859	C. Stolz	1663	1874
J. Layer	1838	1849	E. Schweizer	1866	1870
A. Bührer	1842	1880	Th. Walz	1866	1881
J. F. Metz	1843	1873	J. Deuber	1866	1871
B. Deggeler	1846	1858	W. Schnepf	1866	1871
G. Bösinger	1849	1851	J. Müller	1866	1878
S. Müller	1849	1854	K. Schober	1867	1872
G. Plebst	1851	1869	L. Langel	1868	1873
G. Pfleiderer	1854	1880	F. Gundert	1868	1869
J. Hunziker	1856	1863	J. Hesse	1869	1872
H. Hauff	1858	1865	N. Weitbrecht	1871	1876
J. Brigel	1859	1875	N. Hübner	1871	1879
G. Burkhardt	1859	1869	E. Härlin	1873	1881
J. Mack	1859	1880	M. Mieg	1878	1882
H. Bergfeldt	1860	1874	J. Knausenberger	1878	1883
A. Wenger	1861	1874			

ಈಗ ಇರುವವರೂ ಇತ್ತಲಾಗಿ ವಿಲಾಯತಿಗೆ ಹೋದವರೂ ಇಂಗ್ಲಿಷ್ ರಿಪೋರ್ಟಿನಲ್ಲಿ ಕಾಣ ಬರುವರು.

ಈ ಸಂಕ್ಷೇಪ ವರ್ತಮಾನವನ್ನು ನಮ್ಮ ಸಭೆಯವರ ನೆನಪಿಗೋಸ್ಕರ ರಚಿಸಿದ್ದು.

Printed at the Basel Mission Press, Mangalore.

JUBILEE

OF THE

BASEL EVANGELICAL MISSION

IN INDIA

30th October 1884.

ಈ ದಕ್ಷಿಣ ಹಿಂದುಸ್ಥಾನದ ಪಶ್ಚಿಮ ತೀರದಲ್ಲಿ ಬಾಸೆಲ್ ಮಿಶ್ಯನ್ ಸುವಾರ್ತಾಕಾರ್ಯ ಪ್ರಾರಂಭವಾಗಿ ನಡಿಯುತ್ತಾ ಬಂದು ಈಗ ಐವತ್ತು ವರ್ಷವಾಯಿತೆಂಬದರ ಜ್ಞಾಪಕಾರ್ಥ ಯೋಬೆಲೆಂಬ ಮಹೋತ್ಸಹವು.

೧೮೧೬ನೇ ಇಸವಿಯಲ್ಲಿ ಬಾಸೆಲ್ ಪಟ್ಟಣದಲ್ಲಿ ನಮ್ಮ ಮಿಶ್ಯನ್ ಹುಟ್ಟಿತು. ಫೊನ್‌ಬ್ರೊನ್ ಬ್ಲೊಮ್‌ಹಾರ್ತ್ ಮೊದಲಾದ ಧೊರೆಗಳು ಕಮ್ಮಿಟಿಯಾಗಿ ಈ ಕಾರ್ಯವನ್ನು ಮುಂದರಿಸಿ, ೧೮೨೧ನೇ ಇಸವಿಯಲ್ಲಿ ಮೊದಲು ಕೌಕಾಸಿಯ, ಪಾರ್ಶಿಸ್ಥಾನ ಎಂಬ ಶೀಮೆಗಳಿಗೆ ಮಿಶ್ಯನೆರಿಗಳನ್ನು ಕಳುಹಿಸಿದರು. ಅದೇ ೧೮೨೧ನೇ ಇಸವಿಯಲ್ಲಿ ಬಾಸೆಲ್ ಪಟ್ಟಣದಲ್ಲಿ ಮೊದಲನೇ ಸರ್ತಿ ಮಿಶ್ಯನ್ ಹಬ್ಬ ಆಚರಿಸೋಣಾಯಿತು. ಈ ಕೌಕಾಸಿಯ ಪ್ರಾಂತ್ಯದಲ್ಲಿ ೧೮೩೫ನೇ ಇಸವಿ ವರೆಗೆ ಮಿಶ್ಯನ್ ಕಾರ್ಯವು ಚನ್ನಾಗಿ ನಡೆದು ಬಂದಾಗ್ಯೂ, ವಿರೋಧಿಗಳ ಪ್ರೇರಣೆಯಿಂದ ರುಸ್ಯ ಸರಕಾರದವರು, ಆ ಕಾರ್ಯ ಅಲ್ಲಿ ಇನ್ನು ಮುಂದೆ ನಡಿಸ ಬಾರದೆಂದು ಕಠಿಣ ಅಪ್ಪಣೆ ಕೊಟ್ಟದ್ದರಿಂದ, ೧೮೩೮ನೇ ಇಸವಿಯಲ್ಲಿ ಆ ದಿಕ್ಕಿನಲ್ಲಿ ಮಿಶ್ಯನ್ ಕಾರ್ಯವೆಲ್ಲ ಬಿಡ ಬೇಕಾಯಿತು.

೧೮೨೭ನೇ ಇಸವಿಯಲ್ಲಿ ನಮ್ಮ ಕಮ್ಮಿಟಿಯವರು ಅಫ್ರಿಕದ ಪಶ್ಚಿಮ ದಿಕ್ಕಿನಲ್ಲಿರುವ ಗೋಲ್ಡಕೋಸ್ತ ಎಂಬ ಶೀಮೆಗೆ ಮಿಶ್ಯನೆರಿಗಳನ್ನು ಕಳುಹಿಸ ಪ್ರಾರಂಭಿಸಿದರು. ಅಲ್ಲಿ ಈ ಕೆಲಸವು ಇಷ್ಟು ವರೆಗೆ ನಡಿಯುತ್ತಾ ಬರುತ್ತದೆ. ಈಗ ಅಲ್ಲಿ ಹತ್ತು ಠಾಣ್ಯಗಳು, ೩೮ ಉಪಠಾಣ್ಯಗಳು ಅವೆ; ಅವುಗಳಲ್ಲಿ ೨೨ ವಿಲಾಯತೀ ಮಿಶ್ಯನೆರಿಗಳೂ ೧೫ ಧೊರೆಸಾನಿಗಳೂ ೧೬ ಉಪಪ್ರಸಂಗಿಗಳೂ ೪೯ ಉಪದೇಶಕರೂ ೩೯ ಶಾಲಾ ಉಪಾಧ್ಯಾಯರೂ ಕೆಲಸ ನಡಿಸುತ್ತಾರೆ. ಅಲ್ಲಿ ಸಭೆಯವರ ಲೆಖ್ಖ ೫೫೬೭; ಸ್ನಾನ ಬೋಧನೆ ಹೊಂದುವವರು ೨೦೨ ಜನರು.

ಹಿಂದುಸ್ಥಾನದಲ್ಲಿ ಸಹ ಮಿಶ್ಯನ್ ಕಾರ್ಯ ನಡಿಸ ಬೇಕೆಂದು ನಮ್ಮ ಕಮ್ಮಿಟಿಯವರಿಗೆ ಹಲವು ವರ್ಷಗಳಿಂದ ಆಲೋಚನೆ ಇತ್ತು. ಆದದರಿಂದ ಮೂವತ್ತಮೂರನೇ ಇಸವಿಯಲ್ಲಿ